


SARAYU - Kannada Monthly | December 2014 | Vol. :1 | Issue : 10 | 5116/ಜಯ ಸಂ | ಡಿಸೆಂಬರ್ 2014 | ಪುಟಗಳು : 4

### ಶ್ರೀರಾಮ ಪ್ರಥಮದರ್ಜೆ ಕಾಲೇಜು ಕಲ್ಲಡ್ಕ

# ರಾಷ್ಟ್ರೀಯ ಸೇವಾಯೋಜನೆ ವಾರ್ಷಿಕ ವಿಶೇಷ ಶಿಬಿರ

### ದಿನಾಂಕ 13–11–2014ರಿಂದ 19–11–2014

ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ಶಿಬಿರವು ಸರಕಾರಿ ಕಿರಿಯ ಪ್ರಾಥಮಿಕ



ಶಾಲೆ, ಕಂಟಿಕ ಇಲ್ಲಿ ನಡೆಯಿತು. ಕರ್ನಾಟಕ ವಿಕಾಸ ಬ್ಯಾಂಕಿನ ಕಲ್ಲಡ್ಕ ಶಾಖಾ ಪ್ರಬಂಧಕ ಶ್ರೀ ಜಯರಾಮ್ ಎಂ, ಶಿಬಿರವನ್ನು ಉದ್ಘಾಟಿಸಿದರು. ಪುತ್ತೂರು ವಿವೇಕಾನಂದ ಕಾಲೇಜಿನ ವಿಶ್ರಾಂತ ಪ್ರಾಂಶುಪಾಲ ಪ್ರೊ| ವೇದವ್ಯಾಸ ವಿದ್ಯಾರ್ಥಿಗಳಿಗೆ ಶಿಬಿರದ ಪ್ರಯೋಜನ ಪಡೆಯಲು ಕರೆನೀಡಿದರು. ಅಧ್ಯಕ್ಷತೆಯನ್ನು ಶ್ರೀರಾಮ ವಿದ್ಯಾಕೇಂದ್ರದ ಅಧ್ಯಕ್ಷ ಶ್ರೀ ನಾರಾಯಣ ಸೋಮಯಾಜಿ ವಹಿಸಿದ್ದರು. ಶಿಬಿರದ ದಿನಗಳಲ್ಲಿ ಆಯೋಜಿಸಿದ ವಿವಿಧ ಕಾರ್ಯಕ್ರಮಗಳಲ್ಲಿ ಶ್ರೀ ರಾಜಾರಾಮ ವರ್ಮ, ಶ್ರೀ ರಾಕೇಶ್ ಕುಮಾರ್ ಕಮ್ಮಾಜೆ, ಶ್ರೀ ವಿಶ್ವೇಶ್ವರ ಭಟ್, ಶ್ರೀಮತಿ ಆಶಾ ಪ್ರಸಾದ್, ಶ್ರೀ ವಿಠಲ ನಾಯಕ್, ಶ್ರೀ ಪದ್ಮನಾಭ ಕೊಟ್ಟಾರಿ, ಶ್ರೀ ಕೃಷ್ಣ ಭಟ್ ಗಿಳ್ಕಿಂಜ, ಶ್ರೀ ಸುರೇಶ್ ಪರ್ಕಳ, ಶ್ರೀ ಸೂರ್ಯನಾರಾಯಣ ಭಟ್ ಕಶೆಕೋಡಿ ಮುಂತಾದವರು ಸಂಪನ್ಮೂಲ ವ್ಯಕ್ತಿಗಳಾಗಿ ವಿದ್ಯಾರ್ಥಿಗಳಿಗೆ ಮಾಹಿತಿಯನ್ನೊದಗಿಸಿದರು.

ಶ್ರೀ ಅನಂತ ಶೆಣೈ, ಶ್ರೀ ಸುಂದರ ಸಾಲಿಯಾನ್, ಶ್ರೀ ದಿನೇಶ್ ಅಮ್ಟೂರು, ಶ್ರೀಮತಿ ಸುಜಾತಾ, ಶ್ರೀಮತಿ ಜಯಂತಿ, ಶ್ರೀ ನಾಗರಾಜ್, ಶ್ರೀ ಅನಂದ ಶೆಟ್ಟಿ, ಶ್ರೀ ಜನಾರ್ದನ ಸಪಲ್ಯ, ಶ್ರೀಮತಿ ವಿಜಯ ವಿ. ಪ್ರಭು, ಶ್ರೀ ಬಾಬು ಶೆಟ್ಟಿ ಏಳ್ತಿಮಾರು, ಶ್ರೀ ರಾಮಣ್ಣ ಶೆಟ್ಟಿ ಸುಧೆಕಾರ್ ಮೊದಲಾದವರು ಕಾರ್ಯಕ್ರಮಗಳ ಯಶಸ್ವಿಗೆ ಸಹಕರಿಸಿದರು.

ಶಿಬಿರದಲ್ಲಿ ನಡೆದ ಶ್ರಮದಾನವನ್ನು ಕಂಟಿಕ ಶಾಲೆಯ ಗೌರವಾಧ್ಯಕ್ಷ ಶ್ರೀ ಅನಂತ ಶೆಣೈ ಉದ್ಘಾಟಿಸಿದರು. ಭಾರತ ಮಾತಾ ಪೂಜನಾ ಕಾರ್ಯಕ್ರಮದಲ್ಲಿ ಸಂಸ್ಥೆಯ ಸಂಚಾಲಕ ಡಾ| ಪ್ರಭಾಕರ




ಭಟ್ ದಂಪತಿಗಳು ಉಪಸ್ಥಿತರಿದ್ದರು.

ಮಂಗಳೂರು ವಿವಿಯ ರಾ.ಸೇ. ಯೋಜನೆಯ ಕಾರ್ಯಕ್ರಮ ಸಂಯೋಜಕಿ ಶ್ರೀಮತಿ ವಿನಿತಾ ಕೆ. ಭೇಟಿ ನೀಡಿ ಮಾಹಿತಿ ನೀಡಿದರು.




ದಿನಾಂಕ 19–11–2014ರಂದು ನಡೆದ ಸಮಾರೋಪ ಕಾರ್ಯಕ್ರಮದಲ್ಲಿ ಯುವಜನತೆ ಜಡತ್ವದಿಂದ ಕ್ರಿಯಾಶೀಲತೆಯೆಡೆಗೆ ನಡೆಯುವಲ್ಲಿ ರಾ.ಸೇ. ಯೋಜನೆಯ ಪಾತ್ರದ ಕುರಿತು ಶ್ರೀ ರಘುರಾಜ್ ಉಬರಡ್ಕ ಸಮಾರೋಪ ಭಾಷಣದಲ್ಲಿ ತಿಳಿಸಿದರು. ಅಧ್ಯಕ್ಷತೆಯನ್ನು ಸಂಚಾಲಕ ಡಾ| ಪ್ರಭಾಕರ ಭಟ್ ವಹಿಸಿದ್ದರು. 50 ವಿದ್ಯಾರ್ಥಿಗಳು ಶಿಬಿರದ ಸದುಪಯೋಗವನ್ನು ಪಡೆಕೊಂಡರು. ಪ್ರಾಂಶುಪಾಲ ಕೃಷ್ಣಪ್ರಸಾದ್, ಯೋಜನಾಧಿಕಾರಿ ಹರೀಶ್ ಹಾಗೂ ಉಪನ್ಯಾಸಕರು ಕಾರ್ಯಕ್ರಮದ ಯಶಸ್ವಿಗೆ ಸಹಕರಿಸಿದರು.

## ವಿವಿಧ ಪ್ರವಾಸದ ಕ್ಷಣಗಳು



ಪುತ್ತೂರಿನ ಕ್ಯಾಂಪ್ಕೊ ಚಾಕಲೇಟು ಕಾರ್ಖಾನೆ, ಸಿಪ್–ಒನ್ ನೀರಿನ ಕಾರ್ಖಾನೆ, ಮಹಾಲಿಂಗೇಶ್ವರ ದೇವಸ್ಥಾನ ಪುತ್ತೂರು, ವಿವೇಕಾನಂದ ಶಿಶು ಮಂದಿರ ಪುತ್ತೂರಿಗೆ ಭೇಟಿ ನೀಡಿದ ಒಂದನೇ ತರಗತಿಯ ವಿದ್ಯಾರ್ಥಿಗಳು



ಕುಲಶೇಖರ ಹಾಲಿನ ಡೈರಿ, ಪಿಲಿಕುಳದ ಗುಡಿ ಕೈಗಾರಿಕೆ, ಕೊಡ್ಯಡ್ಕ ಶ್ರೀ ಅನ್ನಪೂರ್ಣೇಶ್ವರೀ ದೇವಸ್ಥಾನ, ಮೂಡಬಿದಿರೆಯ ಸಾವಿರ ಕಂಬದ ಬಸದಿ ಇವುಗಳನ್ನು ವೀಕ್ಷಿಸಿದ ನಾಲ್ಕನೇ ತರಗತಿ ವಿದ್ಯಾರ್ಥಿಗಳು



ಶ್ರೀ ಅನಂತಪದ್ಮನಾಭ ದೇವಸ್ಥಾನ ಕುಡುಪು, ಶಿವರಾಮ ಕಾರಂತ ಮೃಗಾಲಯ ಪಿಲಿಕುಳ, ಗುಡಿ ಕೈಗಾರಿಕೆ, ಪಿಲಿಕುಳ, ಶ್ರೀ ಮಂಜುನಾಥ ದೇವಸ್ಥಾನ ಕದ್ರಿಯನ್ನು ವೀಕ್ಷಿಸಿದ 3ನೇ ತರಗತಿಯ ವಿದ್ಯಾರ್ಥಿಗಳು

## ಶಿಶುಮಂದಿರ

### ಹೊರಸಂಚಾರ : 9.11.2014

ಶ್ರೀ ಸರಸ್ವತಿ ಶಿಶುಮಂದಿರದ ಮಕ್ಕಳು ಮೊಗರ್ನಾಡು ಶ್ರೀ ಮಹಾಗಣಪತಿ ದೇವಸ್ಥಾನ, ನರಹರಿ ಪರ್ವತ, ಅದರ ತಪ್ಪಲಿನಲ್ಲಿರುವ ಗೋ ಶಾಲೆಗೆ ಭೇಟಿನೀಡಿ ಅಲ್ಲಿಂದ ಶ್ರೀರಾಮ ವಿದ್ಯಾಕೇಂದ್ರಕ್ಕೆ ಬಂದು ಅಲ್ಲಿಯ ಪರಿಸರವನ್ನು ವೀಕ್ಷಿಸಿದರು. ಒಟ್ಟು 11 ಮಕ್ಕಳು, ಒಬ್ಬರು ಆಡಳಿತ ಮಂಡಳಿ ಸದಸ್ಯರು ಮತ್ತು ಶ್ರೀಅಕ್ಕಮಹಾದೇವಿ ಶಿಶುಮಂದಿರದ ಮಾತಾಜಿ ಹೊರಸಂಚಾರದಲ್ಲಿ ಜೊತೆಗಿದ್ದರು.

### ಪಾಲಕರ ಸಭೆ : 19.11.2014



ಶ್ರೀರಾಮ ಶಿಶುಮಂದಿರದ ಆಶ್ರಯದಲ್ಲಿ ಈ ವರ್ಷದ 2ನೇ ಪಾಲಕರ ಸಭೆ ನಡೆಯಿತು. ಸಭೆಗೆ ಆಯುರ್ವೇದಿಕ್ ತಜ್ಞ ಶ್ರೀ ಜಿಡ್ಡು ಗಣಪತಿ ಭಟ್ ಆಗಮಿಸಿ ಮಕ್ಕಳ ಬೆಳವಣಿಗೆ, ಆಹಾರ ಪದ್ಧತಿ, ಆರೋಗ್ಯ ಈ ವಿಷಯದ ಬಗ್ಗೆ ಪಾಲಕರಿಗೆ ಮಾಹಿತಿ ನೀಡಿ, ಪಾಲಕರು ಕೇಳಿವಂತಹ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡಿದರು. ವಿದ್ಯಾ-ಕೇಂದ್ರದ ಸಂಚಾಲಕ ಡಾ। ಪ್ರಭಾಕರ ಭಟ್ ಮುಂದೆ ಬರುವ ಕ್ರೀಡೋತ್ಸವದ ಬಗ್ಗೆ ಮಾಹಿತಿಗಳನ್ನು ನೀಡಿ ಪಾಲಕರು ನಿರ್ವಹಿಸಬೇಕಾದ ಜವಾಬ್ದಾರಿ ಬಗ್ಗೆ ತಿಳಿಸಿದರು. ವಿದ್ಯಾಕೇಂದ್ರದ ಅಧ್ಯಕ್ಷ ಶ್ರೀ ನಾರಾಯಣ ಸೋಮಯಾಜಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. 108 ಪಾಲಕರು 5 ಮಂದಿ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.

### ಶಿಶು ಮಂದಿರಗಳಲ್ಲಿ ತುಳಸೀ ಪೂಜೆ 14.11.2014

ಶ್ರೀರಾಮ ಶಿಶುಮಂದಿರದ ಪರಿಸರದಲ್ಲಿ ಉತ್ಥಾನ ದ್ವಾದಶಿಯಂದು ಶಿಶುಮಂದಿರದ ವ್ಯವಸ್ಥಾಪನ ಸಮಿತಿಯ ವತಿಯಿಂದ ತುಳಸೀ ಪೂಜೆಯನ್ನು ಆಚರಿಸಲಾಯಿತು. ಶ್ರೀ ಸೂರ್ಯನಾರಾಯಣ ಭಟ್ ಇವರು ಪೂಜೆಯನ್ನು ನೆರವೇರಿಸಿ ಮಹತ್ವವನ್ನು ತಿಳಿಸಿಕೊಟ್ಟರು. ಸಜಿಪ ಶ್ರೀಕೃಷ್ಣ ಶಿಶುಮಂದಿರದಲ್ಲಿ



ಶ್ರೀ ಸುಬ್ರಹ್ಮಣ್ಯ ಭಟ್ ಪೂಜೆಯನ್ನು ನೆರವೇರಿಸಿ ಶ್ರೀಮತಿ ಪ್ರೇಮಾ ನಾರಾಯಣ ಗೌಡ ಪೂಜೆಯ ಮಹತ್ವವನ್ನು ತಿಳಿಸಿಕೊಟ್ಟರು.

ಶ್ರೀ ಗಣೇಶ ಶಿಶುಮಂದಿರ ಬೊಂಡಾಲದಲಿ ಶ್ರೀ ಅನಂತ್ ಭಟ್ ಪೂಜೆಯನ್ನು ನೆರವೇರಿಸಿ ಶ್ರೀಮತಿ ಮಲ್ಲಿಕಾ ಶೆಟ್ಟಿ ಪೂಜೆಯ ಮಹತ್ವವನ್ನು ತಿಳಿಸಿಕೊಟ್ಟರು.

ಶ್ರೀ ಅಕ್ಕಮಹಾದೇವಿ ಶಿಶುಮಂದಿರ ಬಿಸಿರೋಡ್‌ನಲಿ ಶ್ರೀಯುತ ಸತೀಶ್ ಭಟ್ ಪೂಜೆಯನ್ನು ನೆರವೇರಿಸಿ ಮಹತ್ವವನ್ನು ತಿಳಿಸಿಕೊಟ್ಟರು.

ಶ್ರೀ ಸರಸ್ವತಿ ಶಿಶುಮಮದಿರ ಶೇಡಿಗುರಿಯಲ್ಲಿ ಶ್ರೀಯುತ ಕೇಶವ ಶಾಂತಿ ಇವರು ಪೂಜೆಯನ್ನು ನೆರವೇರಿಸಿ ಡಾ॥ ಕಮಲಾ ಭಟ್ ಪೂಜೆಯ ಮಹತ್ವವನ್ನು ತಿಳಿಸಿಕೊಟ್ಟರು.

## ಪ್ರಾಥಮಿಕ

### ಅತಿಥಿಗಳ ಭೇಟಿ 06.11.2014




ಮೂಲತಃ ಕರಾಚಿಯ ಪ್ರಸ್ತುತ ಮಂಗಳೂರಿನಲ್ಲಿ ನೆಲೆಸಿ ಅಡಿಕೆ ವ್ಯಾಪಾರ ನಡೆಸುತ್ತಿರುವ, ಶ್ರೀ ಮುರಳೀಧರ ರಮಣಿ, ಶ್ರೀ ಸುರೇಶ್ ಕುಮಾರ್ ಹಾಗೂ ಮನೋಹರ ಪ್ರಭು ಮಂಗಳೂರು ಇವರು ವಿದ್ಯಾಕೇಂದ್ರದ ಸಂಚಾಲಕರೊಂದಿಗೆ ಶಾಲೆಯ ಚಟುವಟಿಕೆಗಳನ್ನು ವೀಕ್ಷಿಸಿ ಪ್ರಾಥಮಿಕ ಶಾಲೆಯ ಸರಸ್ವತಿ ವಂದನೆಯಲ್ಲಿ ಪಾಲ್ಗೊಂಡರು.

### ಭಜನೆ ಮತ್ತು ಸಾಮೂಹಿಕ ಹುಟ್ಟುಹಬ್ಬ 01.11.2014

ಸಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಿನಲ್ಲಿ ಹುಟ್ಟಿದ ಮಕ್ಕಳ ಹುಟ್ಟುಹಬ್ಬ ಹಾಗೂ ಭಜನಾ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಪ್ರೌಢ ಶಾಲೆಯ ಶಿಕ್ಷಕಿ ಹಾಗೂ ಪ್ರಾಥಮಿಕ ಶಾಲೆಯ ಪೋಷಕರಾದ ಶ್ರೀಮತಿ ಶಾಂಭವಿ ಅವರು ವಿದ್ಯಾರ್ಥಿಗಳಿಗೆ ಹರಸಿದರು. ಪಿ.ಕೆ.ಪದ್ಮನಾಭ ಮತ್ತು



ಅನ್ನಪೂರ್ಣ ಮಾತಾಜಿ ಉಪಸ್ಥಿತರಿದ್ದು, ಕ್ರೀಡೆ ಮತ್ತು ವಿಜ್ಞಾನ ಮೇಳದಲ್ಲಿ ಪ್ರಶಸ್ತಿ ಪಡೆದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿದರು.

### ಶಾಂತಿವನ ಟ್ರಸ್ಟ್ (ರಿ) ವತಿಯಿಂದ ನಡೆದ ಸ್ಪರ್ಧೆಗಳು 7.11.2014

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಯೋಗ ಮತ್ತು ನೈತಿಕ ಶಿಕ್ಷಣ ಯೋಜನೆ, ಶಾಂತಿವನ ಟ್ರಸ್ಟ್(ರಿ) ಇದರ ಆಶ್ರಯದಲ್ಲಿ ಹಿರಿಯ ಪ್ರಾಥಮಿಕ ಮಕ್ಕಳಿಗಾಗಿ "ಜ್ಞಾನ ಮಂದಾರ" ಎಂಬ ನೈತಿಕ ಮೌಲ್ಯಾಧಾರಿತ ಪುಸ್ತಕದ ಅಧ್ಯಯನ ಕುರಿತ ತಾಲೂಕು ಮಟ್ಟದ ವಿವಿಧ ಸ್ಪರ್ಧೆಗಳು ಶ್ರೀರಾಮ ಪ್ರೌಢಶಾಲೆ ಕಲ್ಲಡ್ಕದಲ್ಲಿ ನಡೆಯಿತು. ಹರ್ಷಿತಾ 7ನೇ ತರಗತಿ ಭಾಷಣ ಸ್ಪರ್ಧೆಯಲ್ಲಿ ಪ್ರಥಮ, ಸುಧಾಂಶು 6ನೇ ತರಗತಿ ಚಿತ್ರಕಲೆಯಲ್ಲಿ ದ್ವಿತೀಯ ಸ್ಥಾನ ಪಡೆದು ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

### ಬಂಟ್ವಾಳ ತಾಲೂಕು ಪ್ರಾಥಮಿಕ ಹಾಗೂ ಪ್ರೌಢಶಾಲಾ ಕ್ರೀಡಾಕೂಟ : 07.11.2014

ಸರಕಾರಿ ಪ್ರೌಢಶಾಲೆ ನಯನಾಡು ಇಲ್ಲಿ ನಡೆದ ಬಂಟ್ವಾಳ ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ ಶ್ರೀರಾಮ ಪ್ರಾಥಮಿಕ ಶಾಲೆಯ ಪಯಾ 7ನೇ ತರಗತಿ ವೈಯಕ್ತಿಕ ಪ್ರಶಸ್ತಿ ಹಾಗೂ ತಂಡವು ಸಮಗ್ರ ಪ್ರಶಸ್ತಿಯನ್ನು ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುತ್ತದೆ.

ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು : ನಾರಾಯಣ ಸೋಮಯಾಜಿ, ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
ಕಾರ್ಯನಿರ್ವಾಹಕ ಸಂಪಾದಕರು : ಮಹೇಶ ನೆಟ್ಲ
ಸಹಸಂಪಾದಕರು : ದಿವ್ಯಾಕುಮಾರಿ, ಕಾವ್ಯ, ಮನೋಜ್, ಜ್ಯೋತಿ, ಚಂದ್ರಿಕಾ, ಶ್ರೀಮತಿ ವಿನುತ ಎಸ್.ಎನ್.
ವ್ಯವಸ್ಥಾಪಕ ಸಂಪಾದಕರು : ಸತೀಶ ಭಟ್, ಶಿವಗಿರಿ
ವಿನ್ಯಾಸ : ಕುಶಾಲಪ್ಪ ಅಮ್ಟೂರು

## ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ 11.11.2014

ಆಳ್ವಾಸ್ ವಿದ್ಯಾಸಂಸ್ಥೆ ಮೂಡಬಿದ್ರೆ ಇಲ್ಲಿ ನಡೆದ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ನಿಶಾಂತ್ ಕೃಷ್ಣ 4ನೇ ತರಗತಿ ಸಂಸ್ಕೃತ ಧಾರ್ಮಿಕ ಪಠಣ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದಿರುತ್ತಾನೆ.

# ಪ್ರೌಢ

## ಕನ್ನಡ ರಾಜ್ಯೋತ್ಸವ : 01.11.2014



ಕನ್ನಡ ರಾಜ್ಯೋತ್ಸವದ ಅಂಗವಾಗಿ ರಸಪ್ರಶ್ನೆ ಕಾರ್ಯಕ್ರಮ ನಡೆಸಲಾಯಿತು. ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ವಸಂತ ಮಾಧವ, ಉಪಸ್ಥಿತರಿದ್ದರು. ಶ್ರೀ ಜಯಾನಂದ ಪೆರಾಜೆ ಕನ್ನಡ, ಸಂಸ್ಕೃತಿಗಳ ಮಹತ್ವ ತಿಳಿಸಿಕೊಟ್ಟರು. ಶ್ರೀ ಕೃಷ್ಣ ಕಾರ್ಯಕ್ರಮ ನಿರೂಪಿಸಿ, ಶ್ರೀ ಜಿನ್ನಪ್ಪ ಶ್ರೀಮಾನ್ ಸ್ವಾಗತಿಸಿದರು. ಅದೇ ದಿನ ಬಂಟ್ವಾಳ ತಾಲೂಕು ಪಂಚಾಯತ್ ಕಚೇರಿಯಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪ್ರೌಢಶಾಲೆಯ ಘೋಷ್ ತಂಡವು ಭಾಗವಹಿಸಿತು

## NMMS ಪರೀಕ್ಷೆ : 02.11.2014

2014ನೇ ಸಾಲಿನ ರಾಜ್ಯ ಮಟ್ಟದ ಪ್ರತಿಭಾನ್ವೇಷಣಾ ಪರೀಕ್ಷೆ (NMMS) ಕಲ್ಲಡ್ಕ ಶ್ರೀರಾಮ ವಿದ್ಯಾಕೇಂದ್ರದಲ್ಲಿ ಜರಗಿತು. ಬಂಟ್ವಾಳ ತಾಲೂಕಿನ 8ನೇ ತರಗತಿಯಲ್ಲಿ ಕಲಿಯುತ್ತಿರುವ ಸುಮಾರು 150ಕ್ಕೂ ಹೆಚ್ಚು ಶಾಲೆಯ 1314 ವಿದ್ಯಾರ್ಥಿಗಳು ಹಾಜರಿದ್ದರು.

## ಗಣ್ಯರ ಭೇಟಿ : 10.11.2014

ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಾಲಯದ



ಅರ್ಚಕ ಶ್ರೀ ಸುಬ್ರಾಯ ಅಡಿಗ ಹಾಗೂ ಶ್ರೀ ಅನಂತಶೆಟ್ಟಿ ಕಾರ್ಪೊರೇಟ್ ಇಂಡಿಯಾ ಇದರ ಅಧ್ಯಕ್ಷರು ಸರಸ್ವತಿ ವಂದನಾದಲ್ಲಿ ಅತಿಥಿಗಳಾಗಿ ಭಾಗವಹಿಸಿದ್ದರು.

## ತಾಲೂಕು ಮಟ್ಟದ ಸ್ಪರ್ಧೆ : 07.11.2014

ಶ್ರೀರಾಮ ಪ್ರೌಢಶಾಲೆಯಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ನೈತಿಕ ಮತ್ತು ಮೌಲ್ಯ ಶಿಕ್ಷಣ ಶಾಂತಿವನ ಟ್ರಸ್ಟ್ ಇದರ ಆಶ್ರಯದಲ್ಲಿ ಜ್ಞಾನಮಂದಾರ ಮತ್ತು ಜ್ಞಾನ ಸಿಂಧೂರ ನೈತಿಕಪುಸ್ತಕ ಆಧಾರಿತ ತಾಲೂಕು ಮಟ್ಟದ ಸ್ಪರ್ಧೆಯನ್ನು ವಿದ್ಯಾಕೇಂದ್ರದ ಸಂಚಾಲಕ ಡಾ॥ ಪ್ರಭಾಕರ ಭಟ್ ಕಲ್ಲಡ್ಕ ಉದ್ಘಾಟಿಸಿ, ಶುಭಹಾರೈಸಿದರು. ಉದ್ಯಮಿ ಶಿವಪ್ರಕಾಶ್, ಅನಂತಶೆಟ್ಟಿ, ಜಿಲ್ಲಾ ಕಾರ್ಯದರ್ಶಿ ಚೆನ್ನಕೇಶವ, ಶ್ರೀರಾಮ ಪ್ರೌಢಶಾಲೆಯ ಮುಖ್ಯ ಶಿಕ್ಷಕ ವಸಂತಮಾಧವ ಉಪಸ್ಥಿತರಿದ್ದರು. ವಿದ್ಯಾರ್ಥಿನಿ ಕೃತಿ (10 ಭಾರ್ಗವ) ಪ್ರಬಂಧ ಸ್ಪರ್ಧೆಯಲ್ಲಿ ದ್ವಿತೀಯಸ್ಥಾನ ಪಡೆದಿರುತ್ತಾಳೆ. ಶಾಂತಿವನ ಟ್ರಸ್ಟ್‌ನ ಯೋಗ ನಿರ್ದೇಶಕ ಶ್ರೀ ಶಶಿಕಾಂತ ಜೈನ್ ಪ್ರಸ್ತಾವನೆಗೈದು, ಶ್ರೀ ಯೋಗಗುರು ಸಂಘದ ಅಧ್ಯಕ್ಷ ಸೋಮಪ್ಪ ಮಡಿವಾಳ ಸ್ವಾಗತಿಸಿ, ಶಿಕ್ಷಕ ಸದಾಶಿವನಾಯಕ್ ವಂದಿಸಿದರು. ಬಂಟ್ವಾಳ ಕ.ಸಾ.ಪ. ಅಧ್ಯಕ್ಷ ಜಯಾನಂದ ಪೆರಾಜೆ ಕಾರ್ಯಕ್ರಮ ನಿರೂಪಿಸಿದರು.

## ಜಿಲ್ಲಾಮಟ್ಟದ ಪ್ರತಿಭಾಕಾರಂಜಿ : 10.11.2014

ದ.ಕ. ಜಿಲ್ಲಾಮಟ್ಟದ ಪ್ರತಿಭಾಕಾರಂಜಿ ಸ್ಪರ್ಧೆಯಲ್ಲಿ ಪ್ರೌಢಶಾಲೆಯ ಜಿತೇಶ್ (10 ವಿಶ್ವೇಶ್ವರಯ್ಯ) ಛದ್ಮವೇಷ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾನೆ.

## ಕ್ರೀಡಾಕೂಟ : 12.11.2014 ಹಾಗೂ 13.11.2014

ವಿವಿಧ ಕ್ರೀಡಾ ಸ್ಪರ್ಧೆಗಳ ಧ್ವಜಾರೋಹಣವನ್ನು ಕ್ಷೇತ್ರ ಸಂಪನ್ಮೂಲ ಅಧಿಕಾರಿ ಶ್ರೀ ನಾರಾಯಣಗೌಡ ನೆರವೇರಿಸಿದರು ಮರುದಿನ ನಡೆದ ವಿವಿಧ ರೀತಿಯ ಗುಂಪು ಆಟಗಳ ಧ್ವಜಾರೋಹಣವನ್ನು ವಿದ್ಯಾಭಾರತಿ ಕ್ಷೇತ್ರೀಯ ಸಂಘಟನಾ ಕಾರ್ಯದರ್ಶಿ ಶ್ರೀ ಜಗದೀಶ್ ನೆರವೇರಿಸಿದರು.

## ಮಕ್ಕಳ ಸಂರಕ್ಷಣೆ ಮತ್ತು ಪೋಕ್ಸೋ ಆಕ್ಟ್ –2012 ಬಗ್ಗೆ ಮಾಹಿತಿ : 24.11.2014

ತಾಲೂಕು ಕಾನೂನು ಸೇವೆಗಳ ಸಮಿತಿ, ವಕೀಲರ ಸಂಘ, ಸಾರ್ವಜನಿಕ ಶಿಕ್ಷಣ ಇಲಾಖೆ, ಕ್ಷೇತ್ರ



ಶಿಕ್ಷಣಾಧಿಕಾರಿಗಳ ಕಛೇರಿ, ಸರ್ವಶಿಕ್ಷಣ ಅಭಿಯಾನ ಕ್ಷೇತ್ರ ಸಂಪನ್ಮೂಲ ಕೇಂದ್ರ, ರೋಟರಿ ಕ್ಲಬ್ ಬಂಟ್ವಾಳ ಹಾಗೂ ಶ್ರೀರಾಮ ವಿದ್ಯಾಕೇಂದ್ರದ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಲಾದ ಮಕ್ಕಳ ಸಂರಕ್ಷಣೆ ಮತ್ತು ಪೋಕ್ಸೋ ಆಕ್ಟ್–2012 ಬಗ್ಗೆ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಏರ್ಪಡಿಸಿದ 5 ದಿನಗಳ ಮೂರನೆಯ ಹಂತದ ಕಾರ್ಯಾಗಾರವನ್ನು ಗೌ. ಹಿರಿಯ ಸಿವಿಲ್ ನ್ಯಾಯಾಧೀಶ ಮತ್ತು ಜೆಎಂಎಫ್‌ಸಿ ಬಂಟ್ವಾಳ ಹಾಗೂ ತಾಲೂಕು ಕಾನೂನು ಸೇವೆಗಳ ಅಧ್ಯಕ್ಷ ಚಂದ್ರಶೇಖರ ಯು. ದೀಪ ಬೆಳಗಿಸಿ ಉದ್ಘಾಟಿಸಿದರು. ಶ್ರೀರಾಮ ವಿದ್ಯಾಕೇಂದ್ರದ ಸಂಚಾಲಕ ಡಾ॥ ಪ್ರಭಾಕರ ಭಟ್ ಅಧ್ಯಕ್ಷತೆ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಬಂಟ್ವಾಳ ರೋಟರಿ ಕ್ಲಬ್ ಅಧ್ಯಕ್ಷ ಪ್ರಕಾಶ ಕಾರಂತ, ರೋಟರಿ ಜಿಲ್ಲಾ ವಲಯ–5ರ ಅಸಿಸ್ಟೆಂಟ್ ಗವರ್ನರ್ ಹಿರಿಯ ನ್ಯಾಯವಾದಿ ಅಶ್ವನಿ ಕುಮಾರ್ ರೈ, ಕಾರ್ಯದರ್ಶಿ ಸಂಜೀವ ಪೂಜಾರಿ, ವಕೀಲರ ಸಂಘ ಅಧ್ಯಕ್ಷ ಚಂದ್ರಶೇಖರ ಪೂಜಾರಿ ಎಂ., ಉಪತಹಶೀಲ್ದಾರ್ ರೋಹಿದಾಸ್, ಸಹಾಯಕ ಸರಕಾರಿ ಅಭಿಯೋಜಕ ಎಂ. ಎಸ್. ಆಲಿ, ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ರಾಜೇಶ್ ಬಿ. ಉಪಸ್ಥಿತರಿದ್ದರು.

ಬಂಟ್ವಾಳ ಕ್ಷೇತ್ರ ಶಿಕ್ಷಣಾಧಿಕಾರಿ ಶೇಷಶಯನ ಕಾರಿಂಜ ಸ್ವಾಗತಿಸಿ ಪ್ರಸ್ತಾವನೆಗೈದರು. ಹಿರಿಯ ವಕೀಲ ಕಜೆ ರಾಮಚಂದ್ರ ಭಟ್ ಪೋಕ್ಸೋ ಕಾಯಿದೆಯ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು. ಮುಖ್ಯೋಪಾಧ್ಯಾಯ ವಸಂತ ಮಾಧವ ವಂದಿಸಿದರು. ಶಿಕ್ಷಕ ಜಿನ್ನಪ್ಪ ಏಳ್ತಿಮಾರ್ ನಿರೂಪಿಸಿದರು.

## ಪುನಶ್ಚೇತನ ತರಬೇತಿ ಶಿಬಿರ : 24 ರಿಂದ 29

ಪುನಶ್ಚೇತನ ತರಬೇತಿ ಶಿಬಿರಗಳು ಶಿಕ್ಷಕರನ್ನು ಕ್ರಿಯಾಶೀಲರನ್ನಾಗಿ ಮಾಡುವುದಲ್ಲದೇ ಬೋಧನೆಯಲ್ಲಿ ಹೊಸತನವನ್ನು ತರಲು ಸಹಕಾರಿಯಾಗುವುದು ಎಂದು ಶ್ರೀರಾಮ ಪದವಿ ವಿದ್ಯಾಲಯದ ಪ್ರಾಚಾರ್ಯ ಕೃಷ್ಣಪ್ರಸಾದ್ ಕಾಯರ್‌ಕಟ್ಟೆ ಹೇಳಿದರು. ಅವರು ಶ್ರೀರಾಮ ಪ್ರೌಢಶಾಲೆಯಲ್ಲಿ ತಾಲೂಕಿನ ಪ್ರಾಥಮಿಕ ಶಾಲೆಯ 4 ಮತ್ತು 5ನೇ ತರಗತಿಯ ಪಠ್ಯಾಧಾರಿತ ವಿಷಯಗಳ ಪುನಶ್ಚೇತನ ಹತ್ತು ದಿನಗಳ 'ಸಮಾಗಮ' ಶಿಬಿರದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು. ಪ್ರೌಢಶಾಲಾ ಮುಖ್ಯೋಪಾಧ್ಯಾಯ ವಸಂತ ಮಾಧವ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಜಯಾನಂದ ಪೆರಾಜೆ ಅತಿಥಿಯಾಗಿದ್ದರು. ತಾಲೂಕು ಸಂಪನ್ಮೂಲ ಸಮನ್ವಯ ಅಧಿಕಾರಿ ರಾಜೇಶ್, ತಾಲೂಕು ಸಂಪನ್ಮೂಲ ವ್ಯಕ್ತಿಗಳಾದ ನಾರಾಯಣ ಗೌಡ, ಪ್ರದೀಪ ಅಮ್ಮೂರು, ನಾಗಾಜ ಪದಕಣ್ಣಾಯ, ವೇಣುಗೋಪಾಲ, ನಿತ್ಯಾನಂದ, ಕುಮಾರ್, ಉಪಸ್ಥಿತರಿದ್ದರು. ಶಿಕ್ಷಕರಾದ ಡೇನಿಯಲ್, ಪ್ರಭಾವತಿ ಬಾಳೆಪುಣಿ, ಸಂಕಪ್ಪ ಶೆಟ್ಟಿ ಬಡಗಬೆಳ್ಳೂರು, ಶಾರದಾ ಹೂಹಾಕುವ ಕಲ್ಲು, ಶೋಭಾ ಪಿ.ಕೆ. ದಡ್ಡಲಕಾಡು, ರಾಮಚಂದ್ರ ನಾಯಕ್ ಮೂಡಂಬೈಲು, ಅನಿಸಿಕೆ ವ್ಯಕ್ತಪಡಿಸಿದರು.

## ವಾರ್ಷಿಕ ಕ್ರೀಡಾಕೂಟ 1.11.14




ಯಜಮಾನ ಇಂಡಸ್ಟ್ರೀಸ್ ವಾಮದಪದವು ಇದರ ಮಾಲೀಕರಾದ ವರದರಾಜ ಪೈ ವಾರ್ಷಿಕ ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿ, ಕ್ರೀಡೆಗಳು ಶಾರೀರಿಕವಾಗಿ ಸದೃಢಗೊಳಿಸುವುದಷ್ಟೇ ಅಲ್ಲ. ಸೋಲು–ಗೆಲುವಿನ ಪ್ರಾಮುಖ್ಯತೆಯನ್ನು ತಿಳಿಸುತ್ತದೆ ಎಂದರು. ಸಂಚಾಲಕ ಡಾ।ಪ್ರಭಾಕರ ಭಟ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

## ಕರಾವಳಿ ಕಾಲೇಜಿಗೆ ಭೇಟಿ 3.11.14

ಕರಾವಳಿ ಇಂಜಿನಿಯರಿಂಗ್ ಕಾಲೇಜಿನ ರಾಜ್ಯ ಮಟ್ಟದ ಸೈನ್ಸ್ ಆಂಡ್ ವೆರೈಟಿ ಕಾಂಪಿಟೀಶನ್ ಅವಿಷ್ಕಾರ್ –2014 ಇದರಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಲ್ಲಿ ಸಂಗಾಮ್ ಸಿನ್ಹಾ ಭರತ್ (ಪ್ರ.ವಿಜ್ಞಾನ ವಿಭಾಗ) ಕೊಲಾಜ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ. ಟ್ರೆಷರ್ ಹಂಟ್ ರಹಸ್ಯ ಶೋಧನೆಯಲ್ಲಿ ದ್ವಿತೀಯ ವಿಜ್ಞಾನ ವಿಭಾಗದ ಹರೀಶ್ ಎಚ್ ಜೆ. ಗಣೇಶ್, ಗೋವಿಂದ ರಾಜ್, ಗಗನ್ ಚಂದು, ವಿಕಾಸ್, ತೇಜಸ್, ಗೌತಮ್, ಪ್ರಜ್ವಲ್ ತೃತೀಯ ಸ್ಥಾನವನ್ನು ಗಳಿಸಿರುತ್ತಾರೆ.

## ಎ.ಬಿ.ವಿ.ಪಿ. ಘಟಕದಿಂದ ಪ್ರತಿಭಟನೆ : 3.11.14

ಕಾಲೇಜಿನ ಎ.ಬಿ.ವಿ.ಪಿ. ಘಟಕದ ರಾಜ್ಯಕಾರ್ಯಕಾರಿಣಿ ಅಕ್ಷತಾರವರ ನೇತೃತ್ವದಲ್ಲಿ ತೀರ್ಥಹಳ್ಳಿಯ ನಂದಿತಾ ಅತ್ಯಾಚಾರದ ವಿರುದ್ಧ ಕಲ್ಲಡ್ಕ ಪೇಟೆಯಲ್ಲಿ ಪ್ರತಿಭಟನೆ ನಡೆಸಲಾಯಿತು.

## ತಾಲೂಕು ಮಟ್ಟದಲ್ಲಿ ಸಮಗ್ರ ತಂಡ ಪ್ರಶಸ್ತಿ

ಅಳಿಕೆ ಪದವಿಪೂರ್ವ ಶಿಕ್ಷಣ ಇಲಾಖೆ, ದ.ಕ. ಜಿಲ್ಲೆ ಶ್ರೀ ಸತ್ಯಸಾಯಿ ಲೋಕ ಸೇವಾ ಪದವಿಪೂರ್ವ ಕಾಲೇಜು ಅಳಿಕೆ ಇವರ ಸಂಯುಕ್ತ ಆಶ್ರಯದಲ್ಲಿ ಬಂಟ್ವಾಳ ತಾಲೂಕು ಮಟ್ಟದ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳ ಕ್ರೀಡಾಕೂಟದಲ್ಲಿ ಶ್ರೀರಾಮ ಕಾಲೇಜಿನ ಹುಡುಗರ ಹಾಗೂ ಹುಡುಗಿಯರ ವಿಭಾಗವು ಸಮಗ್ರ ತಂಡ ಪ್ರಶಸ್ತಿಯನ್ನು ಪಡೆದುಕೊಂಡಿದೆ. ವೈಯಕ್ತಿಕ ವಿಭಾಗದಲ್ಲಿ ಪ್ರಥಮ ವಾಣಿಜ್ಯ ವಿಭಾಗದ ದೀಕ್ಷಿತಾ ಮತ್ತು ಹರ್ಷಿಕಾ ಚಾಂಪಿಯನ್ ಆಗಿರುತ್ತಾರೆ.

## ಸೈನ್‌ಷಿಯಾ 2014 ರಲ್ಲಿ ಭಾಗಿ : 7–8.11.14

ದ್ವಿತೀಯ ವಿಜ್ಞಾನ ವಿಭಾಗದ ಎಂಟು ಮಂದಿ ವಿದ್ಯಾರ್ಥಿಗಳು ಮತ್ತು ಭೌತಶಾಸ್ತ್ರದ ಉಪನ್ಯಾಸಕಿ ಮಹಿಮಾ ಇವರು ವಿವೇಕಾನಂದ ಇಂಜಿನಿಯರಿಂಗ್ ಕಾಲೇಜು ಪುತ್ತೂರು ಇಲ್ಲಿ ನಡೆದ ಸೈನ್‌ಷಿಯಾ 2014 ಕಾರ್ಯಕ್ರಮದಲ್ಲಿ ಭಾಗವಹಿಸಿದರು,

## ವಲಯ ಮಟ್ಟದ ಸ್ಪರ್ಧೆಯಲ್ಲಿ ಪ್ರಶಸ್ತಿ 8.11.2014

ಶ್ರೀ ವೆಂಕಟರಮಣ ಕಾಲೇಜಿನಲ್ಲಿ ನಡೆದ ವಿಜ್ಞಾನ ವಿಭಾಗದ ವಲಯ ಮಟ್ಟದ ಸ್ಪರ್ಧೆಯಲ್ಲಿ ಪ್ರಥಮ ವಿಜ್ಞಾನ ವಿಭಾಗದ ಹೇಮಂತ್, ಮನೋಹರ್, ಸುಹಾನ್ ಇವರು ಪೋಸ್ಟರ್ (ಭಿತ್ತಿಪತ್ರಿಕೆ) ವಿಭಾಗದಲ್ಲಿ ಪ್ರಥಮ ಸ್ಥಾನ ಗಳಿಸಿರುತ್ತಾರೆ. ಸೌರಭ್, ಸುಜನ್, ಸಂಜಯ್, ದೀಕ್ಷಿತ್ ಪ್ರೊಜೆಕ್ಟ್‌ನಲ್ಲಿ ತೃತೀಯ ಹಾಗೂ ಕೃಷ್ಣಪ್ರಿಯ, ಅಪೇಕ್ಷಾ, ಸುಪ್ರಿಯ ಇವರು ರಸಪ್ರಶ್ನೆಯಲ್ಲಿ ತೃತೀಯ ಸ್ಥಾನವನ್ನು ಗಳಿಸಿರುತ್ತಾರೆ.

## ಸಾಂಸ್ಕೃತಿಕ ಸಂಘದ ಸ್ಪರ್ಧೆ–10.11.2014

ಕಾಲೇಜಿನ ಪ್ರತಿಭಾ ದಿನೋತ್ಸವದ ಅಂಗವಾಗಿ ಭಾವನಾ ಸಾಂಸ್ಕೃತಿಕ ಸಂಘದ ವತಿಯಿಂದ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ವಿದ್ಯಾರ್ಥಿಗಳು ನಡೆಸಿಕೊಟ್ಟ ಜಾನಪದ ನೃತ್ಯ, ಕುಣಿತ ಭಜನೆ, ಹೂ ಜೋಡಣೆ, ಜಾನಪದ ಗೀತೆ ಸ್ಪರ್ಧೆ ಆಕರ್ಷಕವಾಗಿತ್ತು. ಸುಮಾರು 25 ಸ್ಪರ್ಧೆಗಳನ್ನು ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾಗಿತ್ತು.

## ಗಣಕೀಕೃತ ಗ್ರಂಥಾಲಯ ಉದ್ಘಾಟನೆ 14.11.14

ಫಾದರ್ ಮುಲ್ಲರ್ ಆಸ್ಪತ್ರೆಯ ಖ್ಯಾತ ಹೃದಯತಜ್ಞ ಡಾ। ಎಚ್. ಪ್ರಭಾಕರ್ ಕಾಲೇಜಿನ ಗಣಕೀಕೃತ ಗ್ರಂಥಾಲಯವನ್ನು ಉದ್ಘಾಟಿಸಿ, ಶಿಕ್ಷಣದ ಜೊತೆಗೆ ಜಗತ್ತಿನಲ್ಲಾಗುವ ಬದಲಾವಣೆಯನ್ನು ತಿಳಿಯಬೇಕಾದರೆ ಪುಸ್ತಕವು ಮಕ್ಕಳಿಗೆ ಸುಲಭವಾಗಿ ಲಭಿಸಬೇಕು ಎಂದರು.



ಅಧ್ಯಕ್ಷತೆಯನ್ನು ಸಂಸ್ಥೆಯ ಸಂಚಾಲಕ ಡಾ। ಪ್ರಭಾಕರ ಭಟ್ ವಹಿಸಿದ್ದರು. ಮಕ್ಕಳು ಓದು–ಬರಹಕ್ಕೆ ಹೆಚ್ಚಿನ ಪ್ರಾಮುಖ್ಯತೆ ಕೊಡಬೇಕೆಂದರು. ಪ್ರಾಂಶುಪಾಲ ಕೃಷ್ಣಪ್ರಸಾದ ಕಾಯರ್‌ಕಟ್ಟೆ ಸ್ವಾಗತಿಸಿ, ಉಪನ್ಯಾಸಕ ಗಿರೀಶ್ ಕುಮಾರ್ ನಿರೂಪಿಸಿದರು. ಉಪನ್ಯಾಸಕಿ ಕು. ರೇಣುಕಾ ವಂದಿಸಿದರು.

## ಕಾರ್ಯಗಾರದಲ್ಲಿ ಭಾಗಿ : 23.11..20014

ವಿವೇಕಾನಂದ ಸೆಂಟರ್ ಫಾರ್ ರಿಸರ್ಚ್ ಸ್ಟಡೀಸ್ (ರಿ) ಪುತ್ತೂರು ಇದರ ವತಿಯಿಂದ ನಡೆದ ಭಾರತೀಯ ನಾಗರಿಕ ಸೇವೆಗಳು : ಮಹತ್ವ ಮತ್ತು ಅವಕಾಶಗಳು ಇದರ ಕುರಿತು ಒಂದು ದಿನದ ಕಾರ್ಯಗಾರದಲ್ಲಿ ಕಾಲೇಜಿನ ಒಟ್ಟು 12 ಮಂದಿ ವಿದ್ಯಾರ್ಥಿಗಳು ಭಾಗವಹಿಸಿದರು.

## ಎಸ್.ಜಿ.ಎಫ್.ಐ.ಗೆ ಆಯ್ಕೆ : 20.11.2014

ವಿದ್ಯಾಭಾರತಿ ಅಖಿಲ ಭಾರತೀಯ ಶಿಕ್ಷಾ ಸಂಸ್ಥಾನಂ ದೆಹಲಿ ಇದರ ವತಿಯಿಂದ ವಿದ್ಯಾನಿಕೇತನ ಪಬ್ಲಿಕ್ ಸ್ಕೂಲ್ ತಲಪಾಡಿ ಮಂಗಳೂರು ಇಲ್ಲಿ ನಡೆದ 27ನೇ






ವಿದ್ಯಾಭಾರತಿ ರಾಷ್ಟ್ರೀಯ ಕ್ರೀಡಾಕೂಟ 2014–15 ಇದರಲ್ಲಿ ಶ್ರೀರಾಮ ಕಾಲೇಜಿನ ದ್ವಿತೀಯ ವಾಣಿಜ್ಯ ವಿಭಾಗದ ಪಲ್ಲವಿ 5ಕಿ.ಮೀ ನಡಿಗೆ ಪ್ರಥಮ ಮತ್ತು 4*400 ರಿಲೇಯಲ್ಲಿ ದ್ವಿತೀಯ, ಪ್ರಥಮ ವಾಣಿಜ್ಯ ವಿಭಾಗದ ದೀಕ್ಷಿತಾ 100ಮೀ. ಹರ್ಡಲ್ಸ್‌ನಲ್ಲಿ ಪ್ರಥಮ, 4*100 ರಿಲೇಯಲ್ಲಿ ಪ್ರಥಮ ಸ್ಥಾನ, ದ್ವಿತೀಯ ವಾಣಿಜ್ಯ ವಿಭಾಗದ ಪ್ರಮೋದ್ ಜೆ.ಎಂ. 4*400 ರಿಲೇಯಲ್ಲಿ ಪ್ರಥಮ , ಪ್ರಥಮ ವಾಣಿಜ್ಯ ವಿಭಾಗದ ಶೃತಿ 4*100 ರಿಲೇಯಲ್ಲಿ ಪ್ರಥಮ ಸ್ಥಾನ ಗಳಿಸಿ ಎಸ್.ಜಿ.ಎಫ್.ಐ. ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ.

## ಕನಕ ಜಯಂತಿ

ಶ್ರೀರಾಮ ಬಾಲಕಿಯರ ವಸತಿನಿಲಯದಲ್ಲಿ ಭಗಿನಿ ಗಂಗಾಮಾತಾಜಿ ಅವರು ಕನಕ ಜಯಂತಿಯ ಬಗ್ಗೆ ಮಾತಾಡುತ್ತಾ, ಕನಕರು ತುಂಬಾ ಬಡಕುಟುಂಬದಲ್ಲಿ ಹುಟ್ಟಿದವರಾದರೂ ಅವರಲ್ಲಿರುವ ಶ್ರದ್ಧೆ ಪ್ರಾಮಾಣಿಕತೆ, ಛಲ ಇವುಗಳಿಂದ ಅವರು ಶ್ರೇಷ್ಠ ವ್ಯಕ್ತಿ ಎನಿಸಿಕೊಂಡರು. ತಮ್ಮ ಪಂಚೇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಂಡು ಯಾರಿಗೂ ಕೆಟ್ಟದ್ದನ್ನು ಮಾಡದೇ ಒಳ್ಳೆಯ ದಾರಿಯಲ್ಲಿಯೇ ನಡೆದವರು ಎಂದು ನುಡಿದರು.

SRI RAMA VIDYAKENDRA TRUST (R.)
HANUMAN NAGAR, KALLADKA
BANTWAL TQ., DAKSHINA KANNADA, KARNATAKA 574 222
Ph.: 08255-275273 / 275183 / 275073 / 275693 / 279673 / 200085 / 279479
Website : **www.srvk.org** E-mail : **info@srvk.org**

BOOK POST

ಸವಿಧೇ,

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Kalladka, Bantwal Tq, D.K. and printed at Anagha Digital Square, Kaikamba, B.C. Road.